ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

Ananda Rao Circle, Bangalore-560009.

No:ME/SRO(1)/57/2018-19 Date:20-09-2018

## EXTENDED NOTIFICATION

Applications are invited from eligible candidates for the post of Director at Karwar Institute of Medical Sciences, Karwar.

**Eligibility Criteria:-**

1. The Candidate shall be selected from amongst the Professors in Government Autonomous Medical College.
2. Post graduate degree in any specialty with minimum of ten years teaching experience as Professor/ Associate Professor rendered in Government Autonomous Medical College/Institution, out of which minimum five years experience should be as Professor.
3. Candidates shall have Administrative experience either as Medical Superintendent or as Head of Department or as Professor at least for Five Years.
4. Maximum upper age limit shall be two years earlier to superannuation i.e, should not have completed 58 years as on the last date for submission of application.
5. Candidates probationary period must have been declared.
6. Candidates shall satisfy the norms of Medical Council of India for the said post.
7. **The Medical Superintendent's and Professors and HOD's of the Government Autonomous Institutions are eligible to apply for the said post as per the eligibility criteria from Sl.No. 1 to 6 remains holds good.**
8. **The Director and Deans of the All Government Medical Autonomous Institutions are instructed to display in the Notice Board of the concern colleges and also circulate the Extended Notification for all concern officers.**

**Mode of Selection:-** Senior most eligible Professors amongst the applicants shall be short listed & called for Interview. Interview date and Venue will be intimated later.

**Pay Scale:-** Rs.37400-67000 + AGP 10000/- with applicable allowances.

**Period of Appointment:-** Maximum four years from the date of appointment or until further Government Order whichever is earlier.

**Instructions:-** Candidates applying to the Director post shall submit application in a prescribed format which can be downloaded from the DME website: www.karnataka.gov.in / dmekarnataka or www.kimskarwar.kar.nic.in and filled up application should be submitted to Directorate of Medical Education, Ananda Rao Circle, Bengaluru-560009 by "registered post with acknowledgement due" with a non-refundable DD for Rs.5000/- drawn in favour of Director of Medical Education, Bangalore along with relevant supporting documents.

**Last date for submission of applications:** 26-09-2018 **before 5:00PM**

Director of Medical Education,
Bangalore

# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

# DIRECTORATE OF MEDICAL EDUCATION

Ananda Rao Circle, Bangalore-560009.

ಸಂಖ್ಯೆ: ವೈಶಿ/ಎಸ್‌ಆರ್‌ಓ(1)/57/2018–19

ದಿನಾಂಕ: 20–09–2018

## ತಿದ್ದುಪಡಿ ಅಧಿಸೂಚನೆ

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ ಈ ಸಂಸ್ಥೆಯ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

**ಅರ್ಹತಾ ಮಾನದಂಡಗಳು:**

1. ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿ ಸರ್ಕಾರಿ ವೈದ್ಯಕೀಯ ಕಾಲೇಜು/ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರು/ಸಹಪ್ರಾಧ್ಯಾಪಕರು/ರೀಡರ್ ಆಗಿ ಕರ್ತವ್ಯ ನಿರ್ವಹಿಸಿದ ಬೋಧನಾ ಅನುಭವ ಹೊಂದಿರಬೇಕು. ಈ ಪೈಕಿ ವಿಭಾಗವೊಂದರಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು. ಈ ಹುದ್ದೆಗಳ ನೇಮಕಾತಿಯಲ್ಲಿ ವಿಭಾಗದ ಮುಖ್ಯಸ್ಥರಿಗೆ ಆದ್ಯತೆ ನೀಡಲಾಗುವುದು. ನಿರ್ದೇಶಕರ ಆಯ್ಕೆಯನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರ ಹಾಗೂ ಸಂಸ್ಥೆಗಳ ಬೈಲಾ ರೀತ್ಯಾ ಮಾಡಲಾಗುವುದು.
2. ಅಭ್ಯರ್ಥಿಗಳು ವೈದ್ಯಕೀಯ ಅಧೀಕ್ಷಕರಾಗಿ ಆಡಳಿತಾನುಭವ ಹೊಂದಿರಬೇಕು ಅಥವಾ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.
3. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.
4. ಅಭ್ಯರ್ಥಿಯು ಖಾಯಂ ಪೂರ್ವ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.
5. ನಿರ್ದೇಶಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಗಳನ್ನು ಪೂರೈಸಿರಬೇಕು.
6. **ಸದರಿ ನಿರ್ದೇಶಕರ ಹುದ್ದೆಗೆ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯಕೀಯ ಅಧೀಕ್ಷಕರು/ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಸದರಿ ಹುದ್ದೆಗೆ ಬೇಕಾಗಿರುವ ಮಾನದಂಡಗಳ ವಿವರಗಳು 1 ರಿಂದ 5 ರವರೆಗೆ ಪೂರೈಸಿರಬೇಕು.**
7. **ಸದರಿ ತಿದ್ದುಪಡಿ ಅಧಿಸೂಚನೆಯನ್ನು ಎಲ್ಲಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಕಾಲೇಜುಗಳ ಸೂಚನಾ ಫಲಕದಲ್ಲಿ ಪ್ರಕಟಿಸುವುದರೊಂದಿಗೆ ಪ್ರತಿಯೊಬ್ಬ ವಿಭಾಗದ ಮುಖ್ಯಸ್ಥರುಗಳಿಗೆ ಮತ್ತು ವೈದ್ಯಕೀಯ ಅಧೀಕ್ಷಕರುಗಳಿಗೆ ಲಿಖಿತ ಪತ್ರವನ್ನು ಜಾರಿಗೊಳಿಸುವಂತೆ ಸೂಚಿಸಿದೆ.**

**ವೇತನ ಶ್ರೇಣಿ:**– 37,400–67,000 + ಎ.ಜಿ.ಪಿ 10,000/– ಮತ್ತು ಅನ್ವಯವಾಗುವ ಭತ್ಯೆಗಳು

**ಸೇವಾವಧಿ:–**

ನೇಮಕಾತಿಯ ದಿನಾಂಕದಿಂದ ನಾಲ್ಕು ವರ್ಷಗಳು, ಅಥವಾ ಮುಂದಿನ ಸರ್ಕಾರದ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ)

ನಿಗದಿತ ಅರ್ಜಿ ನಮೂನೆಯನ್ನು ಡಿ.ಎಂ.ಇ. ವೆಬ್‌ಸೈಟ್: www.karnataka.gov.in/dmekarnataka ಅಥವಾ ಕಿಮ್ಸ್, ಕಾರವಾರ ವೆಬ್‌ಸೈಟ್: www.kimskarwar.kar.nic.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಂಡು, ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಹೆಸರಿನಲ್ಲಿ ರೂ. 5000/–ಗಳ (ಹಿಂದಿರುಗಿಸಲಾಗದಿರುವ) ಡಿಮ್ಯಾಂಡ್ ಡ್ರಾಫ್ಟ್ ಅನ್ನು ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ (ಅಗತ್ಯ ದಾಖಲೆಗಳು ಸೇರಿದಂತೆ) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದ ರಾವ್ ವೃತ್ತ ಬೆಂಗಳೂರು–560009 ರವರಿಗೆ ನೊಂದಾಯಿತ ಅಂಚೆ ಮುಖಾಂತರ ಸ್ವೀಕೃತಿ ಬಾಕಿ ಪತ್ರದೊಂದಿಗೆ **ದಿನಾಂಕ: 26–09–2018ರಂದು ಸಂಜೆ 5:00 ಗಂಟೆಯೊಳಗೆ** ತಲುಪಿಸತಕ್ಕದ್ದು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು,ಬೆಂಗಳೂರು